<u>ಸಾಕ್ಷಿಯನ್ನು ದಿಃ**26.08.2023** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಂದುವರೆದ ಪಾಟೀ ಸವಾಲು ಎದುರುದಾರರ ಪರ ಶ್ರೀ ಕೆ ಎಸ್ ಎಲ್ ವಕೀಲರಿಂದಃ</u>**

ಸಾಕ್ಷಿಗೆ ಸರ್ವೆ ನಂ.81, 2016-17 ಮತ್ತು 2018-19 ರ ಸಾಲಿನ ಎರಡು ಪಹಣಿ ಪತ್ರಿಕೆಗಳನ್ನು ತೋರಿಸಿದಾಗ ಅವುಗಳನುನ ನೋಡಿ ತನ್ನ ತಂದೆ ಹೆಸರಿನಲ್ಲಿ ಖಾತೆ ಇದೆ ಎಂದು ಒಪ್ಪಿದ್ದರಿಂದ ಕ್ರಮಾಗಿ ನಿಆರ್ -1 ಮತ್ತು 2 ಎಂದು ಗುರುತಿಸಲಾಯಿತು. ಸಾಕ್ಷಿಯು ಆ ದಾಖಲೆಗಳಲ್ಲಿ ತನ್ನ ತಂದೆ ಹೆಸರಿಗೆ ಕಡಿಮೆ ವಿಸ್ತೀರ್ಣ ಖಾತೆ ಮಾಡಿದ್ದಾರೆ ಎಂದು ತಿಳಿಸುತ್ತಾರೆ. ನಿಆರ್-1 ರಲ್ಲಿ ತಿಮ್ಮಯ್ಯ ಹೆಸರಿಗೆ ಶೂನ್ಯ ವಿಸ್ತೀರ್ಣ ಖಾತೆ ಇದೆ ಎಂದರೆ ಸಾಕ್ಷಿಯು 1937 ರಿಂದ ಹಾಗೆಯೇ ಬರುತ್ತಿದ್ದೆ ಎಂದು ತಿಳಿಸುತ್ತಾರೆ. ನಿಆರ್ -2 ರಲ್ಲಿ ನನ್ನ ತಂದೆ ಹೆಸರಿಗೆ 25 ಗುಂಟೆ ಖಾತೆ ಬಂದಿದೆ ಎಂದರೆ ನಿಜ. ಆದೆ ಹಿಸ್ಸೆ ಮಾಡಿಕೊಂಡ ಪ್ರಕಾರ ತಿಮ್ಮಯ್ಯ @ ತಿಮ್ಮಣ್ಣ @ ತಿಮ್ಮೇಗೌಡ ರವರಿಗೆ 1 ಎಕರೆ 20 ಗುಂಟೆ ಬರಬೇಕು ಎಂದು ತಿಳಿಸುತ್ತಾರೆ . ಸರ್ವೆ ನಂ.81 ರಲ್ಲಿ 3 ಎಕರೆ 5 ಗುಂಟೆ ಜಮೀನು ಇರುವುದು ನಿಜ. ಆ ಪೈಕಿ ಮುನಿಸ್ವಾಮಿ ಮತ್ತು ರಂಗಪ್ಪ ಇಬ್ಬರಿಗೂ 2 ಎಕರೆ 20 ಗುಂಟೆ ಜಂಟಿಯಾಗಿ ಬರುತ್ತಿದ್ದೆ ಅನ್ನುವುದು ಸುಳ್ಳು. ನಾನು ಅರ್ಜಿಕೊಟ್ಟ ಪ್ರಕಾರ ನಿಆರ್ -2 ರಲ್ಲಿ 3 ಜನರಿಗೆ ಬೇರೆ ಬೇರೆ ವಿಸ್ತೀರ್ಣದ ಖಾತೆ ಬಂದಿದೆ ಎಂದರೆ ಸುಳ್ಳು. ದಾವೆ ಚಾಲ್ತಿಯಲ್ಲಿರುವಾಗ ನಿಆರ್ -2 ರಲ್ಲಿ ಕಾಣುವಂತೆ ನಾನೇ ಮೂರು ಜನರ ಹೆಸರಿಗೆ ಖಾತೆ ಮಾಡಿಸಿದ್ದೇನೆ ಎಂದರೆ ಸುಳ್ಳು. ಸಾಕ್ಷಿಯು ಎದುರುದಾರರು ಮಾಡಿಸಿದ್ದಾರೆ ಎಂದು ಹೇಳುತ್ತಾರೆ. ಎದುರುದಾರರು ದಾವಾ ಸ್ವತ್ತನ್ನು ಯಾರಿಗೂ ಮಾರಾಟ ಅಥವಾ ದಾನ ಮಾಡಿಲ್ಲ ಎಂದರೆ ನಿಜ. ಆದರೆ ಗೊತ್ತಿಲ್ಲದೇ ಖಾತೆ ಮಾಡಿಸಿಕೊಂಡು ಗಂಧದ ಮರ, ಅಡಿಕೆ ಮರಗಳನ್ನು ಕಟ್ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಯಾವುದೇ ಗಂಧದ ಮರ ಇಲ್ಲ ಎಂದರೆ

ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಗಂಧದ ಮರ ಇರುವ ಬಗ್ಗೆ ದಾಖಲೆ ಸಲ್ಲಿಸಿಲ್ಲ ಎಂದರೆ ನಿಜ. ಏಕೆಂದರೆ ಎದುರುದಾರರು ಅದಕ್ಕೆ ಅವಕಾಶ ಕೊಟ್ಟಿಲ್ಲ. ಗಂಧದ ಮರ ಪರವಾನಿಗೆ ಇಲ್ಲದೆ ಕಟ್ ಮಾಡಿದರೆ ಅಪರಾಧವಾಗುತ್ತದೆ ಎಂದರೆ ನಿಜ. ಮುನಿಸ್ವಾಮಿ ಮತ್ತು ರಂಗನಾಥ್ ಇವರ ಮರಣಾನಂತರ ಅವರಿಗೆ ಸೇರಿದ ಜಮೀನು ಅವರ ಮಕ್ಕಳಿಗೆ ಪೌತಿ ಖಾತೆ ಬಂದಲಾವಣೆಯಾಗಿದೆ ಎಂದರೆ ಸರಿಯಲ್ಲ. ಎದುರುದಾರರು ಯಾವುದೇ ರೀತಿ ನ್ಯಾಯಾಲಯದ ಆದೇಶ ಉಲ್ಲಂಘಿಸಿಲ್ಲ ಎಂದರೆ ಸರಿಯಲ್ಲ. ನಾನು ಎದುರುದಾರರಿಗೆ ತೊಂದರೆ ಕೊಡಲು ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತಹಶೀಲ್ದಾರ್ ಹಿರಿಯೂರು ರವರ ಸಕಾಲ ಯೋಜನೆಯಲ್ಲಿ ಖಾತೆ ಬದಲಾವಣೆ ಮಾಡಿದ್ದಾರೆ ಎಂದರೆ ಸುಳ್ಳು.

**ಮರು ವಿಚಾರಣೆ ಇಲ್ಲ.**

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.